**ಕರಡು ಪ್ರತಿ**

# ವಿಶ್ವಬ್ಯಾಂಕ್

ಸಂಪರ್ಕಗಳಿಗಾಗಿ: ದೆಹಲಿಯಲ್ಲಿ: ಗೀತಾಂಜಲಿ ಛೋಪ್ರಾ (91 11) 2461-7241
ಇಮೈಲ್: gchopra@worldbank.org
ವಾಷಿಂಗ್ಟನ್‌ನಲ್ಲಿ: ಕರೀನಾ ಮಾನಸೇ (202) 473-1729
ಇ-ಮೈಲ್: kmanasseh@worldbank.org

## ಭಾರತದಲ್ಲಿನ ಸಣ್ಣ ಹಾಗೂ ಮಧ್ಯಮ ಗಾತ್ರದ ಉದ್ದಿಮೆಗಳಿಗೆ, ವಿಶ್ವಬ್ಯಾಂಕ್‌ನ ಪ್ರೋತ್ಸಾಹ

120 ಮಿಲಿಯ ಅಮೆರಿಕನ್ ಡಾಲರ್ ಸಾಲವು ಹಣಕಾಸು ಹಾಗೂ ಸೇವೆಗಳ ಸಂಪರ್ಕವನ್ನು ಸುಧಾರಿಸುವುದು

ವಾಷಿಂಗ್ಟನ್, ನವೆಂಬರ್ 30, 2004 – ಭಾರತದ ಸಣ್ಣ ಹಾಗೂ ಮಧ್ಯಮ ಗಾತ್ರದ ಉದ್ದಿಮೆ(ಎಸ್‌ಎಮ್‌ಇ)ಗಳನ್ನು ಪ್ರೋತ್ಸಾಹಿಸಲು, ವಿಶ್ವಬ್ಯಾಂಕ್ ಇಂದು "ಭಾರತೀಯ ಸಣ್ಣ ಕೈಗಾರಿಕಾ ಅಭಿವೃದ್ಧಿ ಬ್ಯಾಂಕ್"ಗೆ 120 ಮಿಲಿಯ ಅಮೆರಿಕನ್ ಡಾಲರ್ ಸಾಲವನ್ನು ಮಂಜೂರು ಮಾಡಿದೆ. ಭಾರತ ಸರಕಾರವು ಇದಕ್ಕೆ ಭದ್ರತೆಯನ್ನು ಒದಗಿಸಿದೆ. ಸಣ್ಣ ಹಾಗೂ ಮಧ್ಯಮ ಗಾತ್ರದ ಉದ್ದಿಮೆಗಳ ಹಣಕಾಸು ಸಂಪರ್ಕ ಹಾಗೂ ಉದ್ಯಮ ಅಭಿವೃದ್ಧಿ ಸೇವೆಗಳ ಉದ್ದೇಶ ಹೊಂದಿರುವ ಈ ಸಾಲವು ತನ್ಮೂಲಕ ಅವುಗಳ ಬೆಳವಣಿಗೆ, ಸ್ಪರ್ಧಾತ್ಮಕತೆ ಹಾಗೂ ಉದ್ಯೋಗ ನಿರ್ಮಾಣದ ಗುರಿ ಹೊಂದಿದೆ.

"ಸಣ್ಣ ಹಾಗೂ ಮಧ್ಯಮ ಗಾತ್ರದ ಉದ್ದಿಮೆಗಳ ಹಣಕಾಸು ಹಾಗೂ ಅಭಿವೃದ್ಧಿ ಕಾರ್ಯಯೋಜನೆ"ಯು ಸಣ್ಣ ಉದ್ದಿಮೆಗಳು ತಮ್ಮ ಹಣಕಾಸು ಹಾಗೂ ಅಭಿವೃದ್ಧಿ ಕಾರ್ಯದಲ್ಲಿ ಎದುರಿಸುವ ನೀತಿ/ನಿಯಂತ್ರಣ ಹಾಗೂ ಸಾಂಸ್ಥಿಕ ಚೌಕಟ್ಟು ಸಂಬಂಧಿ ತೊಂದರೆಗಳನ್ನು ಎದುರಿಸಲು ವಿವಿಧ ಬಗೆಯ ವಿಧಾನಗಳ ಅಳವಡಿಕೆಯನ್ನು ಯೋಜನೆಯ ವಿನ್ಯಾಸದಲ್ಲಿ ಬಳಸಲಾಗಿದೆ; ಬ್ಯಾಂಕ್‌ಗಳು ಈ ವಲಯಕ್ಕೆ ಸಾಲ ದೊರಕಿಸಲು ದೀರ್ಘಕಾಲಿಕ ಉತ್ತಮ ಹಣಕಾಸು ವ್ಯವಸ್ಥೆಗೆ ಸಹಾಯ ಮಾಡಲಾಗುವುದು; ಬ್ಯಾಂಕ್‌ಗಳ ಸಾಲ ಸಂಬಂಧಿ ಅಪವ್ಯಯಗಳ ಶಮನ ಹಾಗೂ ಸಾಲಗಳ ವಹಿವಾಟು ವೆಚ್ಚದ ಇಳಿಕೆಯಲ್ಲಿ ಸಹಕರಿಸುವುದು; ಹಾಗೂ ಸಣ್ಣ ಹಾಗೂ ಮಧ್ಯಮ ಗಾತ್ರದ ಉದ್ದಿಮೆಗಳ ಉದ್ಯಮ ಅಭಿವೃದ್ಧಿ ಸೇವೆಗಳನ್ನು ಬಲ ಪಡಿಸುವುದು ಹಾಗೂ ಮಾರುಕಟ್ಟೆ ಸಂಪರ್ಕಕ್ಕಾಗಿ ಕಾರ್ಯಕ್ರಮಗಳು.

"ಸಣ್ಣ ಹಾಗೂ ಮಧ್ಯಮ ಗಾತ್ರದ ಉದ್ದಿಮೆಗಳು ಭಾರತದಲ್ಲಿ ಆರ್ಥಿಕ ಅಭಿವೃದ್ಧಿ, ಉದ್ಯೋಗ ನಿರ್ಮಾಣ ಹಾಗೂ ಹೆಚ್ಚಿನ ಸಮೃದ್ಧಿಗೆ ಪ್ರಚ್ಛನ್ನ ಚಾಲಕಶಕ್ತಿಯಾಗಿದೆ" ಎಂದು ವಿಶ್ವಬ್ಯಾಂಕ್‌ನ ಹಿರಿಯ ಅರ್ಥಶಾಸ್ತ್ರಜ್ಞರಾದ ಪ್ರಿಯಾ ಬಸು ಹೇಳುತ್ತಾರೆ. "ಆದರೆ ಭಾರತದಲ್ಲಿ ಉತ್ಪಾದಕ ವಲಯವನ್ನು ಮುನ್ನಡೆಸಲು ಅವಶ್ಯವಾಗಿರುವ ಹಾಗೂ ಒಟ್ಟಾರೆ ಆರ್ಥಿಕ ಅಭಿವೃದ್ಧಿ, ಉದ್ಯೋಗ ಹಾಗೂ ಬಡತನ ನಿರ್ಮೂಲನೆಗೆ ಬೇಕಾದ ಸ್ಪರ್ಧಾತ್ಮಕತೆಯನ್ನು ಸಾಧಿಸಲು ಅಸಮರ್ಥವಾಗಿವೆ. ಹೆಚ್ಚಿನಂಶ, ಇದು ಸಮರ್ಪಕ ಹಣಕಾಸು ಹಾಗೂ ಉದ್ಯಮ ಅಭಿವೃದ್ಧಿ ಸೇವೆಗಳ ಸಂಪರ್ಕದ ಕೊರತೆಯಿಂದ ಉಂಟಾಗಿದೆ".
"ಬ್ಯಾಂಕರ್‌ಗಳು ಹೆಚ್ಚಿನ ವಹಿವಾಟು ವೆಚ್ಚ, ಈ ಉದ್ದಿಮೆಗಳ ಸಾಲದಲ್ಲಿ ಪರಿಭಾವಿಸುವ ಅಪಾಯಗಳು ಹಾಗೂ ವಿಶ್ವಾಸರ್ಹತೆ ಕೊರತೆಯ ಮಾಹಿತಿ, ಅಸಮರ್ಪಕ ವಿಶ್ವಾಸಾರ್ಹತೆಯ ನಿರ್ಣಯ ಹಾಗೂ ಅಪಾಯ ನಿರ್ವಹಣೆಯ ಕೌಶಲ, ಕಳಪೆ ಮರುಪಾವತಿ ದಾಖಲೆಗಳು ಹಾಗೂ ಎಸ್‌ಎಮ್‌ಇಗಳ ಕೆಳಮಟ್ಟದ ಮಾರುಕಟ್ಟೆ ವಿಶ್ವಾಸರ್ಹತೆಗಳಿಂದಾಗಿ ಎಸ್‌ಎಮ್‌ಇ–ಗಳಿಗೆ ಸಾಲ ನೀಡಲು ಉತ್ಸುಕರಾಗಿಲ್ಲ" ಎಂದು ಹೇಳುತ್ತಾರೆ.

ಎಸ್‌ಎಮ್‌ಇ–ಗಳ ಹಣಕಾಸು ವಿಚಾರ ಹಾಗೂ ಉದ್ಯಮ ಅಭಿವೃದ್ಧಿ ಪ್ರೋತ್ಸಾಹಗಳಿಗೆ ಒತ್ತು ನೀಡುವ ಅಂಶಗಳ ಮೂಲಕ ಕಾರ್ಯಯೋಜನೆಯು – ಬ್ಯಾಂಕ್‌ಗಳು ಸಾಲದ ಗುಣಮಟ್ಟದ ಜೊತೆ ಯಾವುದೇ ರಾಜಿ ಮಾಡಿಕೊಳ್ಳದೆ ಎಸ್‌ಎಮ್‌ಇ–ಗಳಿಗೆ ಲಾಭದಾಯಕ ರೀತಿಯಲ್ಲಿ ಸಾಲ ಸೌಲಭ್ಯಗಳನ್ನು ಹೆಚ್ಚಿಸಬಹುದೆಂದು ಪ್ರದರ್ಶಿಸಲಾಗುವುದು" ಎಂದು ಹೇಳಿದರು.

ಈ ಕಾರ್ಯಯೋಜನೆಯು ಎಸ್‌ಎಮ್‌ಇ–ಗಳ ಹಣಕಾಸು ಹಾಗೂ ಅಭಿವೃದ್ಧಿ ಸಂಪರ್ಕದ ಸುಧಾರಣೆಗಾಗಿ ರೂಪಿಸಲಾಗಿದ್ದು ಈ ಕೆಳಗಿನ ಮೂರು ಅಂಶಗಳನ್ನು ಹೊಂದಿದೆ.

1) ಸಾಲ ಸೌಲಭ್ಯ : ಈ ಸೌಲಭ್ಯವು ವಾಣಿಜ್ಯ ಬ್ಯಾಂಕುಗಳು ಎದುರಿಸುವ ಹಣಕಾಸು ತೊಂದರೆಗಳಿಗೆ ಸಂಬಂಧಿಸಿದುದಾಗಿದೆ. ಈ ಮೂಲಕ ಎಸ್‌ಎಮ್‌ಇ–ಗಳಿಗೆ ಅವಶ್ಯವಿರುವ ಬಂಡವಾಳ ಹಾಗು ಸುಧಾರಿತ ತಂತ್ರಜ್ಞಾನಗಳ ಅಳವಡಿಕೆಗೆ ದೀರ್ಘಕಾಲಿಕ ನಿಧಿಯನ್ನು ಒದಗಿಸಲಾಗುವುದು.

2) ಅಪಾಯ ಹಂಚಿಕೆಯ ಸೌಲಭ್ಯ : ಅಪಾಯ ಹಂಚಿಕೆಯ ಸೌಲಭ್ಯದ ಉದ್ದೇಶ, ವಾಣಿಜ್ಯ ಬ್ಯಾಂಕುಗಳು ಎಸ್‌ಎಮ್‌ಇ–ಗಳಿಗೆ ಸಾಲವನ್ನು ತಕ್ಷಣವೇ ಹೆಚ್ಚಿಸುವುದಾಗಿದೆ. ಇದನ್ನು ವಾಣಿಜ್ಯ ಸಾಧುವಾದ ಹಾಗೂ ಬ್ಯಾಂಕ್‌ಗಳ ಎಸ್‌ಎಮ್‌ಇ ಸಾಲಗಳ ಅಪಾಯಗಳಿಗೆ ಪಾರ್ಶ್ವ ರಕ್ಷಣೆಯನ್ನು ಸ್ವಯಂ ನಿರ್ವಹಣ ಭದ್ರತಾ ಸೌಲಭ್ಯದ ಮೂಲಕ ನೀಡಲಾಗುವುದು.

3) ನೀತಿ ಹಾಗೂ ಸಾಂಸ್ಥಿಕ ಅಭಿವೃದ್ಧಿ ತಾಂತ್ರಿಕ ಸಹಾಯ : ಈ ಅಂಶವು ಭಾರತದಲ್ಲಿನ ಎಸ್‌ಎಮ್‌ಸಿ ಸಾಲ ಮಾರುಕಟ್ಟೆಯ ದಕ್ಷತೆಗೆ ಬಾಧಕವೆನಿಸಿದ ಮಧ್ಯಮ ಅವಧಿ ನೀತಿಯ ಹಾಗೂ ಸಾಂಸ್ಥಿಕ ತೊಂದರೆಗಳ ಕುರಿತು ಸಂಬಂಧಿಸಿದುದಾಗಿದೆ. ತಾಂತ್ರಿಕ ಸಹಾಯದ ಹಣಕಾಸು ನೆರವನ್ನು "ಅಂತರ್‌ರಾಷ್ಟ್ರೀಯ ಅಭಿವೃದ್ಧಿಗಾಗಿರುವ ಇಲಾಖೆ" (ಡಿಎಫ್‌ಐಡಿ)ಯ ಪ್ರಸ್ತಾವಿತ ಸಹಾಯಧನ ಹಾಗೂ ಸ್ಥಳೀಯ ಭಾಗೀದಾರರ ವೆಚ್ಚ ಭರಿಸುವಿಕೆಯ ಮೂಲಕ ಒದಗಿಸಲಾಗುವುದು.

"ಈ ಕಾರ್ಯಯೋಜನೆಯು, ಎಸ್‌ಎಮ್‌ಇಗಳು ಹಣಕಾಸು ಹಾಗೂ ಇತರೆ ಸೇವೆಗಳ ಸಂಪರ್ಕ ಸಾಧಿಸಲು ಉತ್ತಮ ಹೆಜ್ಜೆಯಾಗಿರುವುದು. ಇವುಗಳು ಉದ್ದಿಮೆಗಳ ಸ್ಪರ್ಧಾತ್ಮಕತೆಗೆ ನಿರ್ಣಾಯಕವಾಗಿದೆ" ಎನ್ನುತ್ತಾರೆ ವಿಶ್ವ ಬ್ಯಾಂಕ್‌ನ ಭಾರತದೇಶದ ನಿರ್ದೇಶಕರಾದ ಮೈಕೇಲ್ ಕಾರ್ಟರ್. "ಇದಕ್ಕೂ ಹೆಚ್ಚಾಗಿ, ಕಾರ್ಯಯೋಜನೆಯು, ಭಾರತದಲ್ಲಿ ಅಭಿವೃದ್ಧಿ ಹಾಗೂ ಬಡತನ ನಿರ್ಮೂಲನೆಗೆ ಖಾಸಗೀ ವಲಯವು ಚಾಲಕಶಕ್ತಿಯಾಗಿ ತನ್ನ ಪ್ರಚ್ಛನ್ನ ಬಲವನ್ನು ಸಾಕ್ಷಾತ್ಕರಿಸಿಕೊಳ್ಳಲು ಸಹಾಯ ಮಾಡುವುದು".

"ಪುನರ್‌ರಚನೆ ಮತ್ತು ಅಭಿವೃದ್ಧಿ ಅಂತರರಾಷ್ಟ್ರೀಯ ಬ್ಯಾಂಕ್" ನೀಡಿರುವ 120 ಮಿಲಿಯ ಅಮೆರಿಕನ್ ಡಾಲರ್ ಸಾಲವು ಸ್ಥಿರ ಪ್ರಸರಣ ಸಾಲವಾಗಿದ್ದು 15 ವರ್ಷಗಳಲ್ಲಿ ಮರುಪಾವತಿ ಮಾಡಬಹುದಾಗಿದೆ. (ಐದು ವರ್ಷಗಳ ಹೆಚ್ಚುವರಿ ಅವಧಿಯನ್ನು ಒಳಗೊಂಡಿದೆ). ಈ ಸಾಲದ ಒಟ್ಟು ವೆಚ್ಚ ಸುಮಾರು LIBOR+40 ಆಧಾರಿತ ಅಂಶವಾಗಿದೆ.

ಭಾರತದಲ್ಲಿನ ವಿಶ್ವಬ್ಯಾಂಕ್ ಚಟುವಟಿಕೆಗಳ ಕುರಿತು ಹೆಚ್ಚಿನ ಮಾಹಿತಿಗಾಗಿ ಕೆಳಗಿನ ವೆಬ್‌ಸೈಟ್ ನೋಡಿರಿ.

http://www.worldbank.org/in